# ವಚನಗಳಲ್ಲಿ ಜೀವನ ಮೌಲ್ಯಗಳು


## ಶ್ರೀದೇವಿ ನಾಗಮೂರ್ತಿ*



**DOI: https://doi.org/10.5281/zenodo.19501372**



**ABSTRACT**

ಹನ್ನೆರಡನೆಯ ಶತಮಾನದ ವಚನ ಸಾಹಿತ್ಯವು ಕೇವಲ ಒಂದು ವಿಶಿಷ್ಟ ಕಾವ್ಯ ಪ್ರಕಾರವಾಗಿರದೆ, ಸಮಾಜದಲ್ಲಿನ ಮೌಢ್ಯ, ಜಾತಿಭೇದ ಹಾಗೂ ಅಸಮಾನತೆಗಳ ವಿರುದ್ಧ ಮೂಡಿದ ಬೃಹತ್ ಸಾಮಾಜಿಕ ಕ್ರಾಂತಿಯಾಗಿದೆ. ಬಸವಣ್ಣ, ಜೇಡರ ದಾಸಿಮಯ್ಯ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದ ಶರಣರು ಸರಳ ನುಡಿಗಳಲ್ಲಿ ರಚಿಸಿದ ವಚನಗಳು ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದವು. 'ಅನುಭವ ಮಂಟಪ'ದ ಮೂಲಕ ಪ್ರಜಾಪ್ರಭುತ್ವ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸ್ತ್ರೀ ಸಮಾನತೆಯಂತಹ ಉನ್ನತ ವಿಚಾರಗಳನ್ನು ಸಮಾಜಕ್ಕೆ ನೀಡಲಾಯಿತು. ಕಾಯಕ ಮತ್ತು ದಾಸೋಹ ತತ್ವಗಳ ಮೂಲಕ ಪ್ರತಿಯೊಬ್ಬರ ದುಡಿಮೆಯ ಘನತೆಯನ್ನು ಎತ್ತಿಹಿಡಿಯಲಾಯಿತು. ಇಂದಿನ ಭ್ರಷ್ಟಾಚಾರ, ಮಾನಸಿಕ ಒತ್ತಡ ಹಾಗೂ ಸಂಘರ್ಷಭರಿತ ಸಮಾಜಕ್ಕೆ ವಚನಗಳು ಕೇವಲ ಸಾಹಿತ್ಯವಾಗಿ ಉಳಿಯದೆ, ಸುಂದರ, ಸರಳ ಹಾಗೂ ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ದಾರಿದೀಪವಾಗುವ ಶ್ರೇಷ್ಠ ಜೀವನ ಮೌಲ್ಯಗಳನ್ನು ಹೇಗೆ ಬೋಧಿಸುತ್ತವೆ ಎಂಬುದನ್ನು ಇಲ್ಲಿ ಸವಿವರವಾಗಿ ವಿಶ್ಲೇಷಿಸಲಾಗಿದೆ.



**KEYWORDS:** ವಚನ ಸಾಹಿತ್ಯ, ಜೀವನ ಮೌಲ್ಯಗಳು, ಸಾಮಾಜಿಕ ಕ್ರಾಂತಿ, ಕಾಯಕ ಮತ್ತು ದಾಸೋಹ, ಅನುಭವ ಮಂಟಪ.



* **ಡಾ. ಶ್ರೀದೇವಿ ನಾಗಮೂರ್ತಿ**, ಸರ್ಕಾರಿ ಪಿಯು ಕಾಲೇಜು, ಧುತ್ತರಗೊವ್.

12ನೇ ಶತಮಾನದಲ್ಲಿ ರಚನೆಗೊಂಡ ವಚನಗಳು ಸಾಮಾಜಿಕ ಕ್ರಾಂತಿಯನ್ನು ಮೂಡಿಸುವ ಮೂಲಕ ಜನರನ್ನು ಜಾಗೃತರನ್ನಾಗಿ ಮತ್ತು ಸಮಾಜದಲ್ಲಿ ಜಡ್ಡುಗಟ್ಟಿರುವ ಮೂಢನಂಬಿಕೆಯಿಂದ ಹೊರಬಂದು ಸುಂದರ ಮತ್ತು ಸರಳ ಬದುಕು ಕಟ್ಟಿಕೊಳ್ಳುವಲ್ಲಿ ಹಾಗೂ ಕಾಯಕ ಮಹತ್ವ ತಿಳಿಸುವಲ್ಲಿ ಈ ವಚನಗಳು ಮಹತ್ವದ ಜೀವನದ ಮೌಲ್ಯಗಳನ್ನು ತಿಳಿಸುತ್ತವೆ. ಮೊದಲಿಗೆ ಈ 'ವಚನ' ಎಂದರೆ ಆಣೆ, ಪ್ರಮಾಣ, ಮಾತು ಕೊಡುವುದು ಎಂಬರ್ಥವನ್ನು ಸೂಚಿಸುತ್ತವೆ. ಇದು ಸಾಹಿತ್ಯ ಪರಿಭಾಷೆಯಾಗಿ ಒಂದು ಪ್ರಕಾರದ ಕಾವ್ಯ ಎನ್ನಬಹುದು. ಇದನ್ನು ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶಿಷ್ಟ ಕಾವ್ಯ ಪ್ರಕಾರವಾಗಿದೆ. ಇದು 12ನೇ ಶತಮಾನದ ಒಂದು ಪ್ರಮುಖ ಘಟ್ಟ, ಶರಣರ ಚಳುವಳಿಯ ಮೂಲಕ ಅಭಿವ್ಯಕ್ತಗೊಂಡ ಸಾಹಿತ್ಯ ಪ್ರಕಾರವಾಗಿದೆ. ಈ ಮೂಲಕ ಹೊಸ ಸಾಹಿತ್ಯ ಉದಯವಾಯಿತು. ಇದು ಕೇವಲ ಕನ್ನಡ ಸಾಹಿತ್ಯದಲ್ಲಿ ಮಾತ್ರವಲ್ಲದೆ ವಿಶ್ವಸಾಹಿತ್ಯದಲ್ಲಿ ಒಂದು ಅವಿಭಾಜ್ಯ ಅಂಗವಾಗಿದೆ.

ತಮ್ಮ ಸ್ವರಚನೆಯ ಮೂಲಕ ಪ್ರಭಾವ ಬೀರಿದ ವಚನ ಸಾಹಿತ್ಯವು ಸಾಮಾನ್ಯ ಜನರೂ ತಿಳಿಯುವಂತಹ ಸರಳ ನುಡಿಗಳ ಮೂಲಕ ಸಮಾಜದ ಏಳಿಗೆಗೆ ಕಾರಣವಾಯಿತು. ಅಲ್ಲದೆ ತಮ್ಮ ಮನಸ್ಸಿನ ತಳಮಳ, ವಿಚಾರಗಳನ್ನು ವಚನಗಳ ಮೂಲಕ ಅಭಿವ್ಯಕ್ತಪಡಿಸಲು ಅನುಕೂಲಕರ ವಾತಾವರಣ ನಿರ್ಮಾಣವಾಗಿ ಅಭಿವ್ಯಕ್ತಿ ಸ್ವಾತಂತ್ರ್ಯ ಜನರಲ್ಲಿ ಜಾಗೃತವಾಯಿತು. ಹೀಗೆ ಶರಣರು ತಮ್ಮ ಇಷ್ಟದ ಕಾಯಕ, ದಾಸೋಹದೊಂದಿಗೆ ವಚನಗಳ ರಚನೆ, ಅರ್ಥೈಸಿಕೊಳ್ಳುವಿಕೆ ಅಲ್ಲದೆ ಸಮಾಜದ ಅಭಿವೃದ್ಧಿಗೆ ವಚನ ಸಾಹಿತ್ಯವು ಕಾರಣವಾಯಿತು. ಹೀಗೆ ಬೆಳೆಯುತ್ತಿರುವ ವಚನ ಸಾಹಿತ್ಯವು ಜೀವನ ಮೌಲ್ಯಗಳನ್ನು ಎತ್ತಿ ಹಿಡಿಯುವ ಮಹತ್ವದ ಜವಾಬ್ದಾರಿಯನ್ನು ನಿರ್ವಹಿಸಿದೆ ಅನ್ನಬಹುದು.

ಆದ್ಯ ವಚನಕಾರ ಜೇಡರ ದಾಸಿಮಯ್ಯ, ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಮಾದರ ಚೆನ್ನಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಸೂಳೆ ಸಂಕವ್ವೆ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ ಹೀಗೆ ಮುಂತಾದವರು ತಮ್ಮ ಮೂಲ ಕುಲ ಕಸುಬುಗಳಲ್ಲಿ ತೊಡಗಿದ್ದು ಅಲ್ಲದೆ ತಮ್ಮ ಅಭಿವ್ಯಕ್ತಿಗೆ ಈ ವಚನವನ್ನು ಮುಖ್ಯ ಮಾಧ್ಯಮವಾಗಿಸಿಕೊಂಡರು. ತಮ್ಮ ಅನುಭವಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ವಚನಗಳು ಮಾರ್ಗವಾದವು. ಈ ವಚನಗಳು ಜೀವನ ಮೌಲ್ಯಗಳನ್ನು ಎತ್ತಿ ಹಿಡಿದು ಇತರರಿಗೆ ಒಳ್ಳೆಯ ಮಾರ್ಗವನ್ನು ಸೂಚಿಸುತ್ತವೆ.

**ಜೇಡರ ದಾಸಿಮಯ್ಯ:** ಒಂದು ವಚನದಲ್ಲಿ ಅನ್ನದಾನವೇ ಶ್ರೇಷ್ಠವೆಂದು ಹೇಳುವ ವಚನ ಹೀಗಿದೆ. ಹಾವು–ವಿಷ–ಗಾರುಡಿಗರ ಒಂದು ಶಬ್ದಚಿತ್ರವನ್ನು ನಮ್ಮ ಮುಂದೆ ಬಿಚ್ಚಿ ಕಾವ್ಯವಾಗುತ್ತದೆ "ಹಸಿವೆಂಬ ಹೆಬ್ಬಾವು ಬಸಿರವಿಡಿದಡೆ ವಿಷವೇರಿತ್ತಯ್ಯಾ ಆಪಾದಮಸ್ತಕಕ್ಕೆ, ಹಸಿವನಿಗನ್ನವನಿಕ್ಕಿ ವಿಷವನಿಳುಹಬಲ್ಲಾತನೆ ವಸುಧೆಯೊಳಗಾತನನೇ ಗಾರುಡಿಗ ರಾಮನಾಥ"

ಇಲ್ಲಿ ಹಸಿವು ಎಂಬುದರ ಮಹತ್ವ ತಿಳಿಸುವುದರೊಂದಿಗೆ ಪರಿಹಾರವನ್ನು ಸೂಚಿಸುವುದೇ ಶ್ರೇಷ್ಠ ಎಂಬುದನ್ನು ತಮ್ಮ ವಚನದ ಮೂಲಕ ತಿಳಿಸಿದ್ದಾರೆ. ಇನ್ನೊಂದು ವಚನದಲ್ಲಿ

**"ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ ಒಡಲುಗೊಂಡವನೆಂದು ನೀನೊಮ್ಮೆ ಜರಿದು ನುಡಿಯದಿರಾ, ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ".**

ಈ ವಚನದಲ್ಲಿ ಮನುಷ್ಯ ಹೊಟ್ಟೆ ಹಸಿವನ್ನು ನೀಗಿಸಿಕೊಳ್ಳುವ ವಿಧಾನ ಮತ್ತು

ತನ್ನಂತೆ ಹೊಟ್ಟೆಯನ್ನು ದೇವರು ಕೂಡ ಹೊಂದಿದ್ದರೆ ಮನುಷ್ಯನ ಹಸಿವಿನ ಮಹತ್ವ ತಿಳಿಯುತ್ತದೆ ಎಂದು ತಿಳಿಸುತ್ತಾರೆ.

"ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಸೂಸುವ ವಾಯು ನಿಮ್ಮ ದಾನ..." ಹೀಗೆ ಜೇಡರ ದಾಸಿಮಯ್ಯನು ಪ್ರಕೃತಿದತ್ತವಾಗಿ (ದೈವದತ್ತ) ಸಿಗುವ ದಾನಗಳನ್ನು ಅನುಭವಿಸಿ ಅನ್ಯರನ್ನು ಹೊಗಳದಿರುವಂತೆ ಮತ್ತು ದೈವಕ್ಕೆ ಋಣಿಯಾಗಿರುವ ಮೌಲ್ಯವನ್ನು ಜೀವನಕ್ಕೆ ತಿಳಿಸಿಕೊಡುತ್ತಾರೆ. ಹೀಗೆ ತಮ್ಮ ವಚನಗಳ ಮೂಲಕ ಜೀವನದ ಮೌಲ್ಯವನ್ನು ತಿಳಿಯಬಹುದಾಗಿದೆ.

**ಬಸವಣ್ಣ:** ವಚನ ಸಾಹಿತ್ಯದ ಭದ್ರಬುನಾದಿ ಹಾಕುವಲ್ಲಿ ಮತ್ತು ಸಮಾಜದ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ. ಬಸವಕಲ್ಯಾಣದಲ್ಲಿ "ಅನುಭವ ಮಂಟಪ" ಸ್ಥಾಪಿಸಿದರು. ಈ ಮೂಲಕ ಶಿವಶರಣ, ಶಿವಶರಣೆಯರೆಲ್ಲರೂ ಒಟ್ಟಿಗೆ ಸೇರಿ ಅಲ್ಲಿ ತಮ್ಮ ಪರಸ್ಪರ ಜ್ಞಾನವನ್ನು ಹಂಚಿಕೊಂಡು ಜನಸಾಮಾನ್ಯರಿಗೂ ತಿಳಿಯಪಡಿಸುವಲ್ಲಿ ತಮ್ಮ ಸರಳ ಮಾತುಗಳ ಮೂಲಕ ವಚನಗಳನ್ನು ರಚಿಸಿ ಸಾಮಾಜಿಕ ಕ್ರಾಂತಿಯ ಮೂಲಕ ಜನರ ಅಭಿವೃದ್ಧಿಗೆ, ಸಮಾಜದ ಅಭಿವೃದ್ಧಿಗೆ ಕಾರಣಿಕರ್ತರಾದರು. ಇವರ ವಚನಗಳಲ್ಲೂ ಮಹತ್ವದ ಜೀವನ ಮೌಲ್ಯಗಳು ಅಡಕವಾಗಿವೆ.

**"ನುಡಿದರೆ ಮುತ್ತಿನ ಹಾರದಂತಿರಬೇಕು**
**ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದು,**
**ಅಹುದು ಎನ್ನಬೇಕು".**

ಈ ವಚನದಲ್ಲಿ ಬಸವಣ್ಣನವರು ವ್ಯಕ್ತಿಯ ಮಾತು ಹೇಗಿರಬೇಕು ಎಂಬುದರ ಮಹತ್ವವನ್ನು ತಿಳಿಸುವ ಮೂಲಕ ನಮ್ಮ ಜೀವನದ ಮೌಲ್ಯ ಹೆಚ್ಚಿಸಿಕೊಳ್ಳುವ ಹಾದಿ ಹೇಳಿಕೊಟ್ಟಿದ್ದಾರೆ ಎನ್ನಬಹುದು. ಮತ್ತು ಇನ್ನೊಂದು ವಚನದಲ್ಲಿ

**"ಉಳ್ಳವರು ಶಿವಾಲಯ ಮಾಡುವರು;**
**ನಾನೇನು ಮಾಡಲಿ ಬಡವನಯ್ಯ**
**ಎನ್ನ ಕಾಲೇ ಕಂಬ, ಜಂಗಮಕ್ಕಳಿವಿಲ್ಲ".**

ವಚನಕಾರರಲ್ಲಿ ಬಸವಣ್ಣ ಶ್ರೇಷ್ಠನಾದರೂ ತಾನು ನಾಯಕನಲ್ಲವೆಂಬುದನ್ನು ನಿರಾಕರಿಸುತ್ತಲೇ ಒಂದು ರೀತಿಯಾಗಿ ತನ್ನ ಜನರ ನಾಯಕನಾಗಿ ಮುಂದೆ ನಡೆಸಿದರು. ತನ್ನ ಕಾಲದ ಎಲ್ಲಾ ಬಗೆಯ ಸಾಮಾಜಿಕ ದೋಷ, ದುಷ್ಕೃತ್ಯಗಳನ್ನು ವಿಡಂಬನೆ ಮಾಡಿದ್ದಾರೆ ಹಾಗೂ ಖಂಡಿಸಿದ್ದಾರೆ. ಹಾಗೂ ಎಲ್ಲಾ ಬಲ್ಲವನಾಗಿದ್ದು ವಿನಯವಂತನಾಗಿ ಗರ್ವವಿಲ್ಲದೆ ಸಾಮಾನ್ಯರೊಂದಿಗೆ ಸಾಮಾನ್ಯರಂತೆ ಬೆರೆತು ನಡೆಯುವ ಗುಣಗಳು ಜನರಿಗೆ ಆದರ್ಶ ಮೌಲ್ಯವಾಗಿ ಜೀವನಕ್ಕೆ ದಾರಿದೀಪವಾಗುತ್ತದೆ.

**ಅಲ್ಲಮಪ್ರಭು:** ಈತ ಬೆಡಗಿನ ವಚನಕಾರನಾಗಿದ್ದು, ಶೂನ್ಯಸಂಪಾದನೆಯ ಅಧ್ಯಕ್ಷನಾಗಿದ್ದಾನೆ. 'ಗುಹೇಶ್ವರ' ಎಂಬ ಅಂಕಿತದ ಮೂಲಕ ಅನೇಕ ವಚನಗಳನ್ನು ರಚಿಸಿ ನಮಗೆ ಆದರ್ಶ ಮೌಲ್ಯಗಳಾಗಿ ಪ್ರಭಾವ ಬೀರುತ್ತವೆ.

**'ಕೊಟ್ಟ ಕುದುರೆಯನೇರಲರಿಯದೆ ಮತ್ತೊಂದು ಕುದುರೆಯ ಬಯಸುವವರು, ಧೀರರೂ ಅಲ್ಲ...'**

ಈ ವಚನದ ಮೂಲಕ ಅಲ್ಲಮಪ್ರಭುವು ವ್ಯಕ್ತಿಗೆ ತನ್ನ ಪಾಲಿಗೆ ಬಂದ ಜೀವನವನ್ನು

ಜಾಣ್ಮೆಯಿಂದ ನಿಭಾಯಿಸಿಕೊಂಡು ಮುನ್ನಡೆಯಬೇಕು, ಅದು ಬಿಟ್ಟು ಬೇರೆಯವರ ಜೀವನಕ್ಕೆ ನಮ್ಮ ಜೀವನ ಹೋಲಿಸಿಕೊಂಡು ಗೊಂದಲಕ್ಕೆ ಬೀಳದೆ ನಮ್ಮ ಪಾಲಿನ ಜೀವನವನ್ನು ಸುಗಮ ಮಾಡಿಕೊಂಡು ಬದುಕುವ ಜೀವನ ಮೌಲ್ಯವನ್ನು ತಿಳಿಸುತ್ತಾರೆ. 'ಬೆಟ್ಟಕ್ಕೆ ಚಳಿಯಾದರೆ ಏನು ಹೊದಿಸುವಿರಯ್ಯಾ?' ಹೀಗೆ ತಮ್ಮ ವಚನಗಳ ಮೂಲಕ ಜೀವನದ ಸತ್ಯತೆಯನ್ನು ಜನರಿಗೆ ತಿಳಿಸುತ್ತಾರೆ.

**ಅಕ್ಕಮಹಾದೇವಿ:** ಕನ್ನಡದ ಮೊದಲ ಕವಯಿತ್ರಿ. ಅಂಕಿತನಾಮ 'ಚೆನ್ನಮಲ್ಲಿಕಾರ್ಜುನ' ಮತ್ತು ಶಿವನನ್ನೇ ತನ್ನ ಗಂಡ ಎಂದು ಭಾವಿಸಿ ಲೌಕಿಕ ಗಂಡ ರಾಜನಾಗಿದ್ದರೂ ತಿರಸ್ಕರಿಸಿ ಅನಂತ ಮುಕ್ತಿಗಾಗಿ ಶಿವನನ್ನು ಆರಾಧ್ಯದೈವವಾಗಿ ನಂಬಿ 12ನೇ ಶತಮಾನದಲ್ಲಿಯ ಸಮಾಜದ ಮೌಢ್ಯಗಳನ್ನು ಧಿಕ್ಕರಿಸಿ ಒಬ್ಬ ಮಹಿಳೆ ಒಬ್ಬಂಟಿಯಾಗಿ ಕಲ್ಯಾಣಕ್ಕೆ ಬಂದು ನೆಲೆಸಿ 'ಅನುಭವ ಮಂಟಪ'ದ ಶಿವಶರಣರಲ್ಲಿ ಎಲ್ಲಾ ಪ್ರಮುಖರಿಂದ ತಾನು 'ಅಕ್ಕ' ಎಂಬ ಗೌರವವನ್ನು ಪಡೆದು ಶಿವಶರಣರಲ್ಲಿ ತಾನು ಒಬ್ಬ ಶಿವಶರಣೆಯಾಗಿ ಮಹತ್ವದ ಪಾತ್ರವಹಿಸಿದ್ದಾರೆ. ಹಾಗೂ ಇಂದಿಗೂ ಮಹಿಳೆಯರ ಸ್ಫೂರ್ತಿಯಾಗಿ ಅಕ್ಕಮಹಾದೇವಿಯವರು ಮಹತ್ವದ ಪಾತ್ರವಹಿಸಿದ್ದಾರೆ. ತಮ್ಮ ವಚನಗಳ ಮೂಲಕ ಜೀವನಮೌಲ್ಯಗಳನ್ನು ತಿಳಿಸಿದ್ದಾರೆ.

ಲೋಕದಲ್ಲಿ ಹುಟ್ಟಿದ ಬಳಿಕ, ಸ್ತುತಿ–ನಿಂದನೆಗಳು ಬಂದೊಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂಬ ಸಿದ್ಧಾಂತವನ್ನು ಅಕ್ಕ ರೂಢಿಸಿಕೊಂಡವಳು ನಮಗೂ ಮಹತ್ವದ ಮೌಲ್ಯವಾಗಿ ಪರಿಣಾಮ ಬೀರುತ್ತದೆ.

**ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು**
**ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು,**
**ಶಯನಕ್ಕೆ ಹಾಳು ದೇಗುಲಗಳುಂಟು,**
**ಚೆನ್ನಮಲ್ಲಿಕಾರ್ಜುನ ಆತ್ಮಸಂಗಾತಕ್ಕೆ ನೀನೆನಗುಂಟು...**

ಈ ಸರಳ ವಚನದ ಮೂಲಕ ಅಕ್ಕಮಹಾದೇವಿಯು ಅತಿ ಆಸೆಪಡುವ, ನೆಮ್ಮದಿ ಕಳೆದುಕೊಂಡ ಮನುಷ್ಯರಿಗೆ ಜೀವನ ಎಷ್ಟು ಸರಳವಾಗಿ ನಿಭಾಯಿಸಬಹುದೆಂದು ತಮ್ಮ ವಚನದ ಮೂಲಕ ತಿಳಿಸುತ್ತಾರೆ. ಹೀಗೆ ಎಲ್ಲಾ ವಚನಕಾರರು ವ್ಯಕ್ತಿಯ ಜೀವನದ ಮೌಲ್ಯ ಹೆಚ್ಚಿಸಿಕೊಂಡು ನೆಮ್ಮದಿಯ ಜೀವನ ಕಟ್ಟಿಕೊಳ್ಳಲು ಈ ವಚನಗಳು ಮಹತ್ವದ ಪಾತ್ರವಹಿಸುತ್ತವೆ.

ರಾಜಮಹಾರಾಜರು ಪುರೋಹಿತಶಾಹಿಗಳ ಮಾರ್ಗದರ್ಶನದಲ್ಲಿ ಆಡಳಿತ ನಡೆಸುತ್ತಿದ್ದರು. ಜಾತಿ, ಲಿಂಗ, ವರ್ಣ ಮತ್ತು ವರ್ಗ ಅಸಮಾನತೆಯೇ ಸಾಮಂತಶಾಹಿಯ ತಳಪಾಯವಾಗಿತ್ತು. ಹೀಗೆ ಸಾಮಂತಶಾಹಿ, ಜಾತಿವ್ಯವಸ್ಥೆ ಮತ್ತು ಮೂಢನಂಬಿಕೆಗಳೆಂಬ ವಿಷವರ್ತುಲ ಜೀವನವನ್ನು ಬರ್ಬರಗೊಳಿಸಿತು. ಇಂತಹ ಸಂದರ್ಭದಲ್ಲಿ ವಚನಕಾರರು ಸಾಮಂತಶಾಹಿ, ಜಾತಿ ವ್ಯವಸ್ಥೆ ಮತ್ತು ಮೌಢ್ಯದ ವಿರುದ್ಧ ತಮ್ಮ ಧ್ವನಿಯನ್ನು ಎತ್ತಿದರು. ಇದರ ಭಾಗವಾಗಿ 'ಅನುಭವ ಮಂಟಪ' ಸ್ಥಾಪನೆಯಾಯಿತು. ಇದಕ್ಕೆ ಅಧ್ಯಕ್ಷರ ನೇಮಕ ಮಾಡಿ ಅದನ್ನು 'ಶೂನ್ಯಸಿಂಹಾಸನ'ವೆಂದು ಕರೆದರು. ಸಕಲ ಜೀವಿಗಳ ಲೇಸು, ಜನಕಲ್ಯಾಣ, ಧಾರ್ಮಿಕ, ಸಾಮಾಜಿಕ, ಆಧ್ಯಾತ್ಮಿಕ, ವೈಚಾರಿಕ, ಆರ್ಥಿಕ ಹಾಗೂ ರಾಜಕೀಯ ವಿಷಯಗಳ ಕುರಿತು ಮುಕ್ತವಾದ ಚರ್ಚೆಗಳು ನಡೆದು ಮೂಡಿಬಂದ ಅಭಿಪ್ರಾಯಗಳು ವಚನಗಳಾಗಿ ರೂಪಗೊಂಡವು.

ಪ್ರಜಾಪ್ರಭುತ್ವದ ಮುಖ್ಯ ಅಂಶವಾದ ಪ್ರಶ್ನಿಸುವ, ಚರ್ಚಿಸುವ, ವೈಚಾರಿಕ ಹಾಗೂ

ವೈಜ್ಞಾನಿಕ ಮನೋಭಾವವನ್ನು ಬೆಳೆಸಿದರು. ಅಧಿಕಾರದಲ್ಲಿರುವವರು ಭ್ರಷ್ಟರಾಗದೆ, ಸಂಪತ್ತನ್ನು ಸಂಗ್ರಹಿಸಿಕೊಳ್ಳದೆ ಪಾರದರ್ಶಕವಾಗಿ ಮತ್ತು ಜನಕಲ್ಯಾಣಕ್ಕಾಗಿ ಶ್ರಮಿಸಬೇಕು ಎಂಬುದನ್ನು ತಿಳಿಸಿಕೊಡುತ್ತದೆ ಮತ್ತು ನಮ್ಮ ಕೆಲಸದಲ್ಲಿ ಮಾನವೀಯತೆಯನ್ನು ಮೈಗೂಡಿಸಿಕೊಳ್ಳಬೇಕು ಎಂಬ ಅಂಶವನ್ನು ಈ ವಚನಗಳ ಮೂಲಕ ತಿಳಿಯಬಹುದಾಗಿದೆ. ಅಸ್ಪೃಶ್ಯತೆಯನ್ನು ಖಂಡಿಸಿ, ಯಾವುದೇ ಕಾಯಕದಲ್ಲಿ ಮೇಲು–ಕೀಳು ಎಂಬುದಿಲ್ಲ ಎಂದು ಸಾರಿದರು. ಜಾತಿವ್ಯವಸ್ಥೆಯ ಕಟ್ಟಕಡೆಯಲ್ಲಿ ನಿಲ್ಲಿಸಿ ಅವಮಾನಿಸಿದವರಲ್ಲಿ ದೇವರನ್ನು ಕಂಡು ಗೌರವಿಸಿದ್ದು ಈ ವಚನಕಾಲ ಎನ್ನಬಹುದು. ಪುರುಷ ಮತ್ತು ಸ್ತ್ರೀ ಮಧ್ಯೆ ಇರುವ ಎಲ್ಲಾ ರೀತಿಯ ಭೇದಭಾವಗಳನ್ನು ಮತ್ತು ಅಸಮಾನತೆಯನ್ನು ತಿರಸ್ಕರಿಸಿದರು. ಗಂಡ–ಹೆಂಡತಿಯ ಸಂಬಂಧಗಳಲ್ಲಿ ಸಮಾನತೆಯನ್ನು ಸಾರಿದರು. ಪರಸ್ತ್ರೀಯರು ಯಾವುದೇ ಸ್ಥಿತಿಯಲ್ಲಿರಲಿ ಗೌರವದಿಂದ ತನ್ನ ತಾಯಿಯಂತೆ ಕಾಣಬೇಕೆಂದರು. ಮಹಿಳೆಯರಿಗೆ ಸಮಾನ ಸ್ಥಾನಮಾನ ಮತ್ತು ಅವಕಾಶಗಳನ್ನು ನೀಡಿದ್ದು ವಚನಕಾರರ ಯುಗದಲ್ಲಿ, ಮಹಿಳೆಯರಿಗೂ ಶಿಕ್ಷಣದ ಹಕ್ಕನ್ನು ನೀಡಿದರು. ಅನುಭವಮಂಟಪದಲ್ಲಿ ಮಹಿಳೆಯರು ಸಮಾನ ಅವಕಾಶ ಪಡೆದು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಳ್ಳಲು ಸಾಧ್ಯವಾಯಿತು. ಪ್ರತಿಯೊಬ್ಬರೂ ಕಾಯಕ ಮಾಡಲೇಬೇಕು. ಕಾಯಕದಲ್ಲಿ ಮೇಲು–ಕೀಳು ಇಲ್ಲದೆ ಕಾಯಕ ಮಹತ್ವದ್ದಾಗಿದ್ದು, ದಾಸೋಹ ಪದ್ಧತಿಯನ್ನು ಪಾಲಿಸಲು ತಿಳಿಸುವ ಮೂಲಕ ಹಂಚಿತಿನ್ನುವ ಮನೋಭಾವ ಜನರಲ್ಲಿ ಬೆಳೆಸುತ್ತದೆ. ಮೂಢನಂಬಿಕೆಯಿಂದ ಹೊರಬಂದು ವೈಚಾರಿಕ ಮನೋಭಾವನೆಯೊಂದಿಗೆ ನೆಮ್ಮದಿಯ ಜೀವನಕ್ಕೆ ಈ ವಚನಗಳು ಮೌಲ್ಯವನ್ನು ಒದಗಿಸುತ್ತವೆ.

ವಚನಗಳು ಕೇವಲ ಸಾಹಿತ್ಯವಲ್ಲ, ಅವು ಜೀವನ ಜೀವಿಸುವ ಕಲೆಯನ್ನು ಕಲಿಸುವ ಶಾಲೆಗಳು. ಇಂದು ಭ್ರಷ್ಟಾಚಾರ, ಅಸಮಾನತೆ, ಮಾನಸಿಕ ಒತ್ತಡ ಮತ್ತು ಸಂಘರ್ಷಗಳಿಂದ ಸಂಕಷ್ಟಕ್ಕೊಳಗಾಗಿರುವ ಸಮಾಜಕ್ಕೆ ವಚನಗಳು ನೀಡುವ ಸಂದೇಶ ಸ್ಪಷ್ಟವಾಗಿದೆ, ಒಟ್ಟಿನಲ್ಲಿ ವಚನಗಳಲ್ಲಿ ಜೀವನ ಮೌಲ್ಯಗಳು ಒಳಗೊಂಡಿದ್ದು ನಮಗೆ ದಾರಿದೀಪವಾಗಿವೆ.

**ಪರಾಮರ್ಶನ ಗ್ರಂಥಗಳು:**


1. ತಿಪ್ಪೇರುದ್ರಸ್ವಾಮಿ ಎಚ್., (1968), ಶರಣರ ಅನುಭಾವ ಸಾಹಿತ್ಯ, ಮೈಸೂರು: ಡಿ. ವಿ. ಕೆ. ಮೂರ್ತಿ ಪ್ರಕಾಶನ.
2. ಕಲಬುರ್ಗಿ ಎಂ.ಎಂ., (1993), ಸಮಗ್ರ ವಚನ ಸಂಪುಟ, ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
3. ಬಸವರಾಜು ಲ., (2001), ಬಸವ ವಚನಾಮೃತ, ಮೈಸೂರು: ಗೀತಾ ಬುಕ್ ಹೌಸ್.
4. ರಂಜಾನ್ ದರ್ಗಾ, (2007), ವಚನ: ಒಂದು ಸಾಮಾಜಿಕ ದರ್ಶನ, ಗದಗ: ಶ್ರೀ ತೋಂಟದಾರ್ಯ ಮಠ ಪ್ರಕಾಶನ.
5. ದೇಸಾಯಿ ಪಿ. ಬಿ., (1968), ಬಸವೇಶ್ವರ ಮತ್ತು ಅವರ ಕಾಲ, ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ.
6. ಶಿವರುದ್ರಪ್ಪ ಜಿ. ಎಸ್., (1974), ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ.